ಮಂಗಳೂರು MANGALURU ಗುರುವಾರ, 5 ಜನವರಿ 2017 REG.No.MNG / 121 / 2015-17 Posted at kodialbail P.O / RNI:29813/78/ Daily ಸಂಪುಟ 38 | ಸಂಚಿಕೆ 269 | ಪುಟ 12+4 | ಬೆಲೆ



**ಏಕದಿನ, ಟಿ-20 ನಾಯಕತ್ವಕ್ಕೂ ಧೋನಿ ಗುಡ್‌ಬೈ**

>>> ಪುಟ 11


**ಕ್ಯಾಪ್ಟನ್ ಸಾಧನೆ**

| ಏಕದಿನ | | ಟಿ-20 | |
|---|---|---|---|
| ಒಟ್ಟು ಪಂದ್ಯ | 199 | ಒಟ್ಟು ಪಂದ್ಯ | 72 |
| ಗೆಲುವು | 110 | ಗೆಲುವು | 42 |

**ಸೋಂಕು ತಡೆ ಯತ್ನ...**

ಹಕ್ಕಿ ಜ್ವರ ದೃಢಪಟ್ಟ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯಕ್ಕೆ ಸಾರ್ವಜನಿಕ ಪ್ರವೇಶವನ್ನು ನಿಷೇಧಿಸಲಾಗಿದ್ದು, ಮೃಗಾಲಯದಾದ್ಯಂತ ಸೋಂಕು ಹರಡದಂತೆ ತಡೆಯಲು ಔಷಧಿ ಸಿಂಪಡಿಸುವ ಕಾರ್ಯ ನಡೆಯುತ್ತಿದೆ. >>> ವಿವರ ಪುಟ 4

ಹೊಸ ದಿಗಂತ



## ಫೆ.19ರಂದು ನಡೆಯಲಿರುವ ನಿಟ್ಟೆ ಮಂಗಳೂರು ಮ್ಯಾರಥಾನ್ ಲಾಂಛನ ಬಿಡುಗಡೆ

# ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕ್ರೀಡೆ ಪೂರಕ

**ಮಂಗಳೂರು:** ದಕ್ಷಿಣ ಕನ್ನಡ ಅಥ್ಲೆಟಿಕ್ ಅಸೋಸಿಯೇಶನ್‌ನ ಸಹಕಾರದೊಂದಿಗೆ ನಿಟ್ಟೆ ವಿಶ್ವವಿದ್ಯಾನಿಲಯ ಹಾಗೂ ನಿಟ್ಟೆ ವಿದ್ಯಾಸಂಸ್ಥೆಯ ನೇತೃತ್ವದಲ್ಲಿ ಫೆ.19ರಂದು ಮಂಗಳೂರಿನಲ್ಲಿ ನಡೆಯಲಿರುವ ನಿಟ್ಟೆ ಮಂಗಳೂರು ಐದನೇ ವರ್ಷದ ಮ್ಯಾರಥಾನ್‌ನ ಲಾಂಛನ ಬಿಡುಗಡೆ ಸಮಾರಂಭ ಬುಧವಾರ ಮಂಗಳೂರಿನಲ್ಲಿ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ಜಿ. ಜಗದೀಶ್ ಲಾಂಛನ ಬಿಡುಗಡೆಗೊಳಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಕ್ರೀಡೆಯ ಪಾತ್ರ ಮಹತ್ವದ್ದು. ಕ್ರೀಡೆಯಲ್ಲಿ ತನ್ನನ್ನು ತೊಡಗಿಸಿಕೊಂಡಾತ ಆರೋಗ್ಯವಂತನಾಗಿರುತ್ತಾನೆ. ಮ್ಯಾರಥಾನ್‌ಗೆ ವಯಸ್ಸಿನ ಅಡ್ಡಿಯಿಲ್ಲ. ನಿಟ್ಟೆ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಮ್ಯಾರಥಾನ್ ಆಯೋಜಿಸುತ್ತಿರುವುದು ಉತ್ತಮ ಅಂಶ. ಹೆಚ್ಚಿನ ಸಂಖ್ಯೆಯಲ್ಲಿ ಈ ಮ್ಯಾರಥಾನ್‌ನಲ್ಲಿ ಭಾಗವಹಿಸುವಂತಾಗಬೇಕು ಎಂದು ಶುಭ ಹಾರೈಸಿದರು.





ಅಧ್ಯಕ್ಷತೆ ವಹಿಸಿದ್ದ ನಿಟ್ಟೆ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎನ್.ವಿನಯ ಹೆಗ್ಡೆ ಮಾತನಾಡಿ, ಕ್ರೀಡೆ ನಮ್ಮ ಬದುಕಿನ ಭಾಗವಾಗಬೇಕು. ಎಲ್ಲಾ ಶಿಕ್ಷಣ ಸಂಸ್ಥೆಗಳು ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಈ ಬಾರಿಯ ಮ್ಯಾರಥಾನ್‌ನಲ್ಲಿ ಮ್ಯಾರಥಾನ್‌ನಲ್ಲಿ ಸುಮಾರು 25 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು.

ರಾಜ್ಯ ಅಮೆಚೂರ್ ಅಥ್ಲೆಟಿಕ್ ಅಸೋಸಿಯೇಶನ್ ಕಾರ್ಯದರ್ಶಿ ಎನ್.ಚಂದ್ರಶೇಖರ ರೈ, ಡಿಕೆಎಎ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ, ಬ್ರಾಂಡ್ ಅಂಬಾಸಿಡರ್‌ಗಳಾದ ಶ್ರೀಧರ ಆಳ್ವ ಮತ್ತು ಅನಿಲ್ ಶೆಟ್ಟಿ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು.

ನಿಟ್ಟೆ ವಿಶ್ವವಿದ್ಯಾಲಯದ ಪ್ರೊ ಚಾನ್ಸೆಲರ್ ವಿಶಾಲ್ ಹೆಗ್ಡೆ ಸ್ವಾಗತಿಸಿ, ಡಿಕೆಎಎ ಕಾರ್ಯದರ್ಶಿ ತಾರಾನಾಥ ಶೆಟ್ಟಿ ವಂದಿಸಿದರು. ನಿಟ್ಟೆ ವಿಶ್ವವಿದ್ಯಾಲಯದ ನಿರ್ದೇಶಕ ಡಾ.ರಾಜಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಕ್ರೀಡೆಯ ಪಾತ್ರ ಮಹತ್ವದ್ದು. ಕ್ರೀಡೆಯಲ್ಲಿ ತನ್ನನ್ನು ತೊಡಗಿಸಿಕೊಂಡಾತ ಆರೋಗ್ಯವಂತನಾಗಿರುತ್ತಾನೆ. ಮ್ಯಾರಥಾನ್‌ಗೆ ವಯಸ್ಸಿನ ಅಡ್ಡಿಯಿಲ್ಲ. ನಿಟ್ಟೆ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಮ್ಯಾರಥಾನ್ ಆಯೋಜಿಸುತ್ತಿರುವುದು ಉತ್ತಮ ಅಂಶ.**

■ ಡಾ.ಕೆ.ಜಿ. ಜಗದೀಶ್

THE NEW INDIAN EXPRESS
BENGALURU • THURSDAY • JANUARY 5, 2017 • ₹5.00 • PAGES 16 • MANGALURU EDITION



READ SHARE FOLLOW
newindianexpr
facebook.com/thenewindianexpress

## Nitte Mangaluru Marathon logo launched

Mangaluru: Sports activities teach many lessons to a person in his life, said Dakshina Kannada Deputy Commissioner K G Jagadeesha on Wednesday. He was addressing the logo launch of 'Nitte Mangaluru Marathon-2017' to be held on February 19. He said sports activities keep people healthy while promoting activities by organisations help in creating awareness. Dakshina Kannada Athletics Association president Manjunath Bhandary said the marathon will be a huge success as the number of participants are increasing year by year. There is an expectation of 25,000 participants this year, he added. Nitte University Vice-chancellor N Vinaya Hegde said there were 15,000 participants last year while participants will be more on the fifth year of the marathon. The event will be a part of World Health Day to create awareness among public on health, he added. Nitte University director Rajshekar M said the Nitte- Mangaluru half-marathon and 10K will have five categories for primary school students to senior citizens. There will be 10-km, five-km, three-km and two-km runs. The marathon will start from Mangala stadium and will be concluded at the same venue. Noted sports personalities like Shridhar Alva and Anil Shetty and others will be the chief guests during the programme. Interested can register their names at Dakshina Kannada Athletics Association office in Mangala stadium or by visiting www.marathon.nitte.edu.in, he added.




Dignitaries at the marathon logo launch

5.1.2017 THURSDAY
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
epaper.kannadaprabha.in www.kannadaprabha.in kannadaprabhakp @kprabhanews
ಮುಗಿಯದ ಕಗ್ಗಂಟು 09
ಸೆಪ್ಟೆಂಬರ್‌ಗೆ ಜಿಎಸ್‌ಟಿ ಅನುಮಾನ
ಇಂದು ಕೆಎಸ್‌ಸಿಎ
ಪದಾಧಿಕಾರಿಗಳ
ಆಯ್ಕೆ ಸಾಧ್ಯತೆ
ಕನ್ನಡಪ್ರಭ
ನೇರ. ದಿಟ್ಟ. ನಿರಂತರ



ಕಹಾನಿ-2 ನಂ
ಜಾನ್ ಚಿತ್ರದಲ
ಬಾಲನ್ ನಟನ
#TRENDING:

CENTRAL LIBRARY

# ನಿಟ್ಟೆ ಮಂಗಳೂರು ಮ್ಯಾರಥಾನ್ ಲಾಂಛನ, ಪೋಸ್ಟರ್ ಅನಾವರಣ

## ಕ್ರೀಡಾಕೂಟಗಳಲ್ಲಿ ವಿಜೇತರಿಗೆ ನಗದು ಪ್ರೋತ್ಸಾಹಧನ ನೀಡಲು ಆಗ್ರಹ

• **ಕನ್ನಡಪ್ರಭ ವಾರ್ತೆ** ಮಂಗಳೂರು

ನಿಟ್ಟೆ ವಿಶ್ವವಿದ್ಯಾನಿಲಯ, ದಕ್ಷಿಣ ಕನ್ನಡ ಅಥ್ಲೆಟಿಕ್ ಎಸೋಸಿಯೇಶನ್ ಸಹಯೋಗದಲ್ಲಿ ಮಂಗಳೂರಿನಲ್ಲಿ ಫೆ.19ರಂದು ನಡೆಯಲಿರುವ 5ನೇ 'ನಿಟ್ಟೆ ಮಂಗಳೂರು ಮ್ಯಾರಥಾನ್'ನ ಲಾಂಛನ ಮತ್ತು ಪೋಸ್ಟರ್‌ಗಳನ್ನು ದ.ಕ. ಜಿಲ್ಲಾಧಿಕಾರಿ ಡಾ.ಕೆ.ಜಿ. ಜಗದೀಶ್ ಬುಧವಾರ ಅನಾವರಣ ಮಾಡಿದರು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿ, ಕ್ರೀಡೆಗಳಿಗೆ ಉತ್ತೇಜನ ನೀಡುವುದರಿಂದ ಬಲಿಷ್ಠ ದೇಶ ಕಟ್ಟಲು ಸಾಧ್ಯ. ಮಾನವ ದೇಹ ಓಟಕ್ಕೆ ಹೇಳಿಮಾಡಿದಂತಿದ್ದು, ಮ್ಯಾರಥಾನ್ ಓಟಕ್ಕೆ ಎಲ್ಲ ವಯಸ್ಸಿನ ಜನರೂ ಭಾಗವಹಿಸಬಹುದು ಎಂದರು.

**ಪ್ರೋತ್ಸಾಹಧನ ನೀಡಲಿ:** ಮ್ಯಾರಥಾನ್‌ನ ಬ್ರ್ಯಾಂಡ್ ಅಂಬಾಸಿಡರ್ ಶ್ರೀಧರ್ ಆಳ್ವ ಮಾತನಾಡಿ, ಜನಸಂಖ್ಯೆಯ ಶೇ.1ರಷ್ಟು ಮಂದಿ ಮಾತ್ರ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಈ ಪ್ರಮಾಣ ಹೆಚ್ಚಬೇಕು. ಕ್ರೀಡಾಕೂಟಗಳಲ್ಲಿ ವಿಜೇತರಿಗೆ ನಗದು ಪ್ರೋತ್ಸಾಹಧನ ನೀಡಬೇಕು. ಅದರಲ್ಲಿ ಶೇ.15ರಷ್ಟು ಕೋಚ್‌ಗಳಿಗೆ ಮೀಸಲಿಡಬೇಕು. ಚೀನಾ ಮತ್ತಿತರ ದೇಶಗಳಲ್ಲಿ ಅದನ್ನು ಪಾಲನೆ ಮಾಡಲಾಗುತ್ತಿದೆ ಎಂದು ಒತ್ತಾಯಿಸಿದರು.




ನಿಟ್ಟೆ ಮಂಗಳೂರು ಮ್ಯಾರಥಾನ್‌ನ ಲಾಂಛನ ಬಿಡುಗಡೆ ಮಾಡುತ್ತಿರುವ ಜಿಲ್ಲಾಧಿಕಾರಿ ಡಾ.ಜಗದೀಶ್.

ನಿಟ್ಟೆ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎನ್. ವಿನಯ ಹೆಗ್ಡೆ ಮಾತನಾಡಿ, ಕೆಲವು ಶಿಕ್ಷಣ ಸಂಸ್ಥೆಗಳನ್ನು ಹೊರತುಪಡಿಸಿದರೆ ಹೆಚ್ಚಿನವು ಕ್ರೀಡೆಗೆ ಮಹತ್ವ ನೀಡುತ್ತಿಲ್ಲ. ಶಿಕ್ಷಣ ಮತ್ತು ಕ್ರೀಡೆ ವಿದ್ಯಾರ್ಥಿಗಳ ಏಳಿಗೆಗೆ ಪೂರಕವಾಗಿ ನಡೆಯುವ ಕ್ರಿಯೆಯಾಗಬೇಕು. ಕ್ರೀಡಾಪಟು ಎನ್ನಿಸುವುದಕ್ಕಿಂತಲೂ ಕ್ರೀಡೆಯ ಮೇಲೆ ಪ್ರೀತಿ ಬೆಳೆಸಿಕೊಳ್ಳುವುದು ಮುಖ್ಯ ಎಂದರು.

ರಾಜ್ಯ ಅಮೆಚೂರ್ ಅಥ್ಲೆಟಿಕ್ ಎಸೋಸಿಯೇಶನ್ ಕಾರ್ಯದರ್ಶಿ ಎನ್. ಚಂದ್ರಶೇಖರ ರೈ, ದ.ಕ. ಅಥ್ಲೆಟಿಕ್ ಎಸೋಸಿಯೇಶನ್ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ, ಕಾರ್ಯದರ್ಶಿ ತಾರಾನಾಥ ಶೆಟ್ಟಿ, ನಿಟ್ಟೆ ವಿವಿ ಪ್ರೊ ಚಾನ್ಸಲರ್ ವಿಶಾಲ್ ಹೆಗ್ಡೆ, ನಿರ್ದೇಶಕ ಡಾ.ರಾಜಶೇಖರ್ ಎಂ., ಬ್ರ್ಯಾಂಡ್ ಅಂಬಾಸಿಡರ್ ಅನಿಲ್ ಶೆಟ್ಟಿ ಮತ್ತಿತರರು ಇದ್ದರು.

ಗುರುವಾರ, ಜನವರಿ 5, 2017 | ಮಂಗಳೂರು | ₹ 4.00 | ಪುಟ 24 | ಸಂಪುಟ 20 | ಸಂಚಿಕೆ 5

goo.gl/S62nF1 /prajavani.net @prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Sahyadri College of Engineering & Management * Adyar, Mangalore - 7
CENTRAL LIBRARY

ಕಾಮನಬಿಲ್ಲು
2017ರಲ್ಲಿನ ಅದ್ದೂರಿ ಬೈಕ್‌ಗಳು



ಬಿ.ಇಡಿ ಕಾಲೇಜುಗಳಿಗೆ ಮುಳುವಾದ ಅವಧಿ ವಿಸ್ತರಣೆ 5

ಪದವಿ ವಿದ್ಯಾರ್ಥಿಗಳ ಘರ್ಷಣೆ ಸುಖಾಂತ್ಯ 4



| ಸೆನ್ಸೆಕ್ಸ್ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|
| 26,633 | ₹28,506 (ಬೆಂಗಳೂರು) | ₹40,400 (ಬೆಂಗಳೂರು) | 68.05 |

## ನಿಟ್ಟೆ ಮ್ಯಾರಥಾನ್ ಲಾಂಛನ ಬಿಡುಗಡೆ

# 'ಕ್ರೀಡೆಯಿಂದ ಆರೋಗ್ಯವಂತ ದೇಶದ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಮಂಗಳೂರು: ಕ್ರೀಡಾ ಚಟುವಟಿಕೆಯನ್ನು ಪ್ರೋತ್ಸಾಹಿಸುವುದು ಮಹತ್ವದ ಕೆಲಸ. ಅದರಿಂದ ಆರೋಗ್ಯವಂತ ದೇಶವನ್ನು ನಿರ್ಮಿಸುವುದು ಸಾಧ್ಯವಾಗಲಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ಜಿ.ಜಗದೀಶ್ ಹೇಳಿದರು.

ನಗರದ ಓಷಿಯನ್ ಪರ್ಲ್ ಹೋಟೆಲ್‌ನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ನಿಟ್ಟೆ- ಮಂಗಳೂರು ಮ್ಯಾರಥಾನ್- 2017ರ ಲಾಂಛನ ಅನಾವರಣ ಮಾಡಿ ಮಾತನಾಡಿದ ಅವರು, 'ಮಕ್ಕಳು ಕ್ರೀಡೆಯಲ್ಲಿ ಹೆಚ್ಚು ಭಾಗಿಯಾದರೆ ಹೆಚ್ಚು ಬಲಿಷ್ಠರಾಗುತ್ತಾರೆ. ಕ್ರೀಡಾ ಮನೋಭಾವ ಇರುವವರು ಮಾತ್ರವೇ ದೊಡ್ಡ ಸವಾಲುಗಳನ್ನೂ ಧೈರ್ಯವಾಗಿ ಎದುರಿಸುತ್ತಾರೆ. ಈ ದೃಷ್ಟಿಯಿಂದ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯಬೇಕಿದೆ' ಎಂದರು.

ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಮ್ಯಾರಥಾನ್‌ನತ್ತ ಹೆಚ್ಚು ಆಸಕ್ತಿ ಬೆಳೆಯುತ್ತಿರುವುದು ಸಂತೋಷದ ವಿಚಾರ. ಮ್ಯಾರಥಾನ್ ಕಠಿಣ ಅಭ್ಯಾಸ ಮತ್ತು ಆಸಕ್ತಿಯನ್ನು ಬಯಸುವ ಕ್ರೀಡೆ. ಮಂಗಳೂರಿನಲ್ಲಿ ಸತತ ಐದು ವರ್ಷಗಳಿಂದ ನಿಟ್ಟೆ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಮ್ಯಾರಥಾನ್ ನಡೆಯುತ್ತಿರುವುದು ಉತ್ತಮ ಬೆಳವಣಿಗೆ. ಇದಕ್ಕೆ ಜಿಲ್ಲಾಡಳಿತ ಸಂಪೂರ್ಣ ಸಹಕಾರ ನೀಡಲಿದೆ ಎಂದು ಹೇಳಿದರು.




ಮಂಗಳೂರಿನ ಓಷಿಯನ್ ಪರ್ಲ್ ಹೋಟೆಲ್‌ನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ಜಿ.ಜಗದೀಶ್ ಅವರು ನಿಟ್ಟೆ– ಮಂಗಳೂರು ಮ್ಯಾರಥಾನ್– 2017ರ ಲಾಂಛನ ಅನಾವರಣ ಮಾಡಿದರು.
ಪ್ರಜಾವಾಣಿ ಚಿತ್ರ

ಮ್ಯಾರಥಾನ್‌ನ ರಾಯಭಾರಿಯಾಗಿರುವ ಹಿರಿಯ ಕ್ರೀಡಾಪಟು ಶ್ರೀಧರ ಆಳ್ವ ಮಾತನಾಡಿ, 'ಶಿಕ್ಷಣದಂತೆ ಕ್ರೀಡೆಯನ್ನೂ ಕಡ್ಡಾಯ ಮಾಡಬೇಕು. ಪಾಶ್ಚಿಮಾತ್ಯ ರಾಷ್ಟ್ರಗಳು ಮತ್ತು ಐರೋಪ್ಯ ರಾಷ್ಟ್ರಗಳ ಮಾದರಿಯಲ್ಲಿ ಕ್ರೀಡೆಯನ್ನು ಉತ್ತೇಜಿಸಲು ವಿಶೇಷ ಯೋಜನೆಗಳನ್ನು ರೂಪಿಸಬೇಕು. ನಿಟ್ಟೆ- ಮಂಗಳೂರು ಮ್ಯಾರಥಾನ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೀಡೆಯ ಬಗೆಗಿನ ಆಸಕ್ತಿ ಹೆಚ್ಚಿಸಲು ನೆರವಾಗಲಿದೆ' ಎಂದರು.

ನಿಟ್ಟೆ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್.ವಿನಯ್ ಹೆಗ್ಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷ ಮಂಜುನಾಥ್ ಭಂಡಾರಿ, ನಿಟ್ಟೆ ವಿ.ವಿ ಸಹ ಕುಲಾಧಿಪತಿ ವಿಶಾಲ್ ಹೆಗ್ಡೆ, ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಚಂದ್ರಶೇಖರ್ ರೈ, ಮ್ಯಾರಥಾನ್‌ನ ಮತ್ತೊಬ್ಬ ರಾಯಭಾರಿಯಾಗಿರುವ ಹಿರಿಯ ಕ್ರೀಡಾಪಟು ಅನಿಲ್ ಶೆಟ್ಟಿ, ನಿಟ್ಟೆ ವಿ.ವಿ. ನಿರ್ದೇಶಕ ಡಾ.ಎಂ.ರಾಜಶೇಖರ್ ಉಪಸ್ಥಿತರಿದ್ದರು.

**ಫೆ. 19ಕ್ಕೆ ಮ್ಯಾರಥಾನ್:** ನಿಟ್ಟೆ- ಮಂಗಳೂರು ಮ್ಯಾರಥಾನ್ ಫೆಬ್ರುವರಿ 19ಕ್ಕೆ ನಡೆಯಲಿದ್ದು, 20,000ಕ್ಕೂ ಹೆಚ್ಚು ಜನರು ಪಾಲ್ಗೊಳ್ಳಬಹುದು ಎಂದು ಸಂಘಟಕರು ನಿರೀಕ್ಷಿಸಿದ್ದಾರೆ. ಪ್ರಾಥಮಿಕ ಶಾಲಾ ಹಂತದಿಂದ ಪರಿಣಿತರ ಹಂತದವರೆಗೆ ಐದು ವಿಭಾಗಗಳಲ್ಲಿ ಮ್ಯಾರಥಾನ್ ನಡೆಯಲಿದೆ. ಮಂಗಳಾ ಕ್ರೀಡಾಂಗಣದಿಂದ ಆರಂಭವಾಗುವ ಈ ಓಟ ವಿವಿಧ ದೂರಗಳನ್ನು ಕ್ರಮಿಸಿ ಪುನಃ ಮಂಗಳಾ ಕ್ರೀಡಾಂಗಣಕ್ಕೆ ಮರಳಲಿದೆ.

ERTISE
SPACE
ACT :
93085
43895
W ADS
Consultants
DAD, HUBLI.

▪ ಮಂಗಳೂರು ▪ ಹುಬ್ಬಳ್ಳಿ ▪ ಕಲಬುರಗಿ ▪ ಬೆಂಗಳೂರು ▪ ದಾವಣಗೆರೆ

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

▪ ಸಂಪುಟ 58 ▪ ಸಂಚಿಕೆ 356 ಗುರುವಾರ, 5, ಜನವರಿ, 2017 ಪುಟ 12+8 ರೂ. 4–00

CELEBRATE TH
NEW YEAR
WITH
ATTRACTIVE
DISCOUNT
Offer from
1-1-17 to 20-1-1
RUCHI SILK & SAR
Gandhi Chowk, Dharwad, 0836-221
RUCHI SILK
Dajibanpeth, Hubli. 0836-22165

## ನಿಟ್ಟೆ ಮಂಗಳೂರು ಮ್ಯಾರಥಾನ್ ಲಾಂಛನ ಬಿಡುಗಡೆ



ಮಂಗಳೂರು ಮ್ಯಾರಥಾನ್ ಲಾಂಛನ ಬಿಡುಗಡೆಗೊಂಡಿತು.

ಮಂಗಳೂರು: ನಿಟ್ಟೆ ವಿದ್ಯಾಸಂಸ್ಥೆಯ ನೇತೃತ್ವದಲ್ಲಿ ಫೆ.19ರಂದು ಮಂಗಳೂರಿನಲ್ಲಿ ನಡೆಯಲಿರುವ ನಿಟ್ಟೆ ಮಂಗಳೂರು ಐದನೇ ವರ್ಷದ ಮ್ಯಾರಥಾನ್‌ನ ಲಾಂಛನ ಬಿಡುಗಡೆಗೊಂಡಿತು.

ಬಿಡುಗಡೆಗೊಳಿಸಿದ ದ.ಕ. ಜಿಲ್ಲಾಧಿಕಾರಿ ಡಾ.ಕೆ.ಜಿ.ಜಗದೀಶ್, ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಕ್ರೀಡೆಯ ಪಾತ್ರ ಮಹತ್ವದ್ದು . ಕ್ರೀಡೆಯಲ್ಲಿ ತನ್ನನ್ನು ತೊಡಗಿಸಿಕೊಂಡಾತ ಆರೋಗ್ಯವಂತನಾಗಿರುತ್ತಾನೆ. ಮ್ಯಾರಥಾ ನ್‌ಗೆ ವಯಸ್ಸಿನ ಅಡ್ಡಿಯಿಲ್ಲ. ನಿಟ್ಟೆ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಮ್ಯಾರಥಾನ್ ಆಯೋಜಿಸುತ್ತಿರುವುದು ಉತ್ತಮ ಅಂಶ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿಟ್ಟೆ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಎನ್.ವಿನಯ ಹೆಗ್ಡೆ, ಕ್ರೀಡೆ ನಮ್ಮ ಬದುಕಿನ ಭಾಗವಾಗಬೇಕು. ಎಲ್ಲಾ ಶಿಕ್ಷಣ ಸಂಸ್ಥೆಗಳು ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಈ ಬಾರಿಯ ಮ್ಯಾರಥಾನ್‌ನಲ್ಲಿ ಸುಮಾರು 25 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಯಿದೆ ಎಂದರು.

ರಾಜ್ಯ ಅಮೆಚೂರ್ ಅಥ್ಲೆಟಿಕ್ ಅಸೋಸಿಯೇಶನ್ ಕಾರ್ಯದರ್ಶಿ ಎನ್.ಚಂದ್ರಶೇಖರ ರೈ , ಡಿಕೆಎಎ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ, ಬ್ರಾಂಡ್ ಅಂಬಾಸಿಡರ್‌ಗಳಾದ ಶ್ರೀಧರ ಆಳ್ವ ಮತ್ತು ಅನಿಲ್ ಶೆಟ್ಟಿ ಮಾತನಾಡಿದರು. ನಿಟ್ಟೆ ವಿಶ್ವವಿದ್ಯಾಲಯದ ಪ್ರೊ ಚಾನ್ಸಲರ್ ವಿಶಾಲ್ ಹೆಗ್ಡೆ ಸ್ವಾಗತಿಸಿ, ಡಿಕೆಎಎ ಕಾರ್ಯದರ್ಶಿ ತಾರಾನಾಥ ಶೆಟ್ಟಿ ವಂದಿಸಿದರು. ನಿಟ್ಟೆ ವಿಶ್ವವಿದ್ಯಾಲಯದ ನಿರ್ದೇಶಕ ಡಾ.ರಾಜಶೇಖರ್ ಕಾರ್ಯಕ್ರಮ ನಿರ್ವಹಿಸಿದರು.

estival Offer!!!
K Manipal - 22.5lacs
K Santhkette - 38lacs
K Udupi City - 42lacs
(inclusive of all)
Contact
2215/9844615740/0820-4298989

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

CENTRAL LIBRARY
Sahyadri College of Engineering & Management

ರಿಜಿಡ್ ಪಿ.ವಿ.
ಶ್ರೀಕೃಷ್ಣ
ಕರ್ಣ, ಹಟ್ಟಿಯಂಗಡಿ
ಕುಂದಾಪುರ Tq, ಉಡುಪಿ Dist,
Ph: (08254) 271261, 271361 (R).
264361, 264444 (Factory)

No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಜನವರಿ 5, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು 14+4 (UDP 8, KUK 8, MS

# ನಿಟ್ಟೆ- ಮಂಗಳೂರು ಮ್ಯಾರಥಾನ್ ಲಾಂಛನ, ಪೋಸ್ಟರ್ ಬಿಡುಗಡೆ

ಮಂಗಳೂರು, ಜ. 4: ಕ್ರೀಡೆಯ ಮೂಲಕ ಸಮಾಜ ಹಾಗೂ ದೇಶ ನಿರ್ಮಾಣ ಸಾಧ್ಯವಾಗಿದ್ದು ಹೆಚ್ಚಿನ ಪ್ರೋತ್ಸಾಹ ಅಗತ್ಯವಾಗಿದೆ. ಹಲವು ಭಾರತೀಯರು ಮ್ಯಾರಥಾನ್ ಕ್ರೀಡೆಯಲ್ಲಿ ತಮ್ಮ ಸಾಧನೆಯನ್ನು ತೋರ್ಪಡಿಸಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಜಿ. ಜಗದೀಶ್ ಹೇಳಿದರು.

ನಿಟ್ಟೆ ವಿಶ್ವವಿದ್ಯಾನಿಲಯ, ದ.ಕ. ಅ್ಯತ್ಲೆಟಿಕ್ ಅಸೋಸಿಯೇಶನ್ ಸಹಯೋಗದಲ್ಲಿ ಫೆ. 19ರಂದು ಆಯೋಜಿಸಲಾಗಿರುವ 5ನೇ 'ನಿಟ್ಟೆ- ಮಂಗಳೂರು ಮ್ಯಾರಥಾನ್ 2017'ರ ಲಾಂಛನ ಹಾಗೂ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.




ಕ್ರೀಡೆಯಲ್ಲಿ ಶಕ್ತಿ (ಸ್ಟ್ರೆಂಥ್) ಹಾಗೂ ತ್ರಾಣ (ಸ್ಟೆಮಿನಾ) ಎಂಬ ಎರಡು ವಿಧಗಳಿದ್ದು ಮ್ಯಾರಥಾನ್ ತ್ರಾಣ ಅವಶ್ಯಕವಾದ ಕ್ರೀಡೆಯಾಗಿದೆ. ಕ್ರೀಡೆ ಹಿರಿಮೆಯನ್ನು ಹೆಚ್ಚಿಸುವುದಲ್ಲದೇ ಸಾಧನೆಗೆ ಪೂರಕವಾಗಿದೆ ಎಂದು ಹೇಳಿದ ಅವರು ತಮ್ಮ ಐಎಎಸ್ ಫೌಂಡೇಶನ್ ಕೋರ್ಸ್‌ನ ಅಂಗವಾಗಿದ್ದ 23 ಕಿ.ಮೀ. ಮ್ಯಾರಥಾನ್ ಬಗ್ಗೆ ನೆನಪಿಸಿಕೊಂಡರು. ಮ್ಯಾರಥಾನ್ ಸ್ವಲ್ಪ ಕಷ್ಟವಾಗಿದ್ದರೂ ಪ್ರತಿಯೊಬ್ಬರೂ ಓಡಬಹುದಾಗಿದೆ. ಇದು ಯಾವುದೇ ವ್ಯಕ್ತಿಗೆ, ಪ್ರಾಯಕ್ಕೆ ಸೀಮಿತವಾಗಿರದ್ದರಿಂದ ಹಿರಿಯರು, ಅಂಗವೈಕಲ್ಯವನ್ನು ಹೊಂದಿರುವವರು ಕೂಡ ಇದರಲ್ಲಿ ಭಾಗವಹಿಸಬಹುದಾಗಿದ್ದು ಗುರಿಯನ್ನು ಕೂಡ ತಲುಪಬಹುದಾಗಿದೆ. ಕ್ರೀಡೆಯಿಂದ ದೈಹಿಕವಾಗಿಯೂ ಬಲಶಾಲಿಗಳಾಗಬಹುದು ಎಂದರು.

ಎನ್. ವಿನಯ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಈ ಮ್ಯಾರಥಾನ್‌ನಲ್ಲಿ 25,000 ಮಂದಿ ಭಾಗವಹಿಸುವ ಅಂದಾಜು ಹಾಕಿಕೊಳ್ಳಲಾಗಿದೆ. ಇದರ ಸಫಲತೆಗೆ ಜಿಲ್ಲಾಡಳಿತದ ಬೆಂಬಲ ಅಗತ್ಯವಿದೆ ಎಂದು ದ.ಕ. ಅ್ಯತ್ಲೆಟಿಕ್ಸ್ ಅಸೋಸಿಯೇಶನ್ ಅಧ್ಯಕ್ಷ ಡಾ। ಮಂಜುನಾಥ ಭಂಡಾರಿ ತಿಳಿಸಿದರು.

ನಿಟ್ಟೆ ವಿಶ್ವವಿದ್ಯಾನಿಲಯದ ಸಹ ಕುಲಾಧಿಪತಿ ವಿಶಾಲ್ ಹೆಗ್ಡೆ, ನಿರ್ದೇಶಕ ಡಾ। ರಾಜಶೇಖರ್ ಎಂ., ರಾಜ್ಯ ಅಮೆಚೂರ್ ಅ್ಯತ್ಲೆಟಿಕ್ ಅಸೋಸಿಯೇಶನ್ ಕಾರ್ಯದರ್ಶಿ ಎನ್.ಚಂದ್ರಶೇಖರ ರೈ, ಬ್ರ್ಯಾಂಡ್ ಅಂಬಾಸಡರ್‌ಗಳಾದ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಾದ ಶ್ರೀಧರ ಆಳ್ವ, ಅನಿಲ್ ಶೆಟ್ಟಿ, ದ.ಕ. ಅ್ಯತ್ಲೆಟಿಕ್ ಅಸೋಸಿಯೇಶನ್ ಕಾರ್ಯದರ್ಶಿ ತಾರಾನಾಥ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಐದನೇ ವರ್ಷದ ಈ ಮ್ಯಾರಥಾನ್ ಫೆ. 19ರಂದು ನಡೆಯಲಿದ್ದು, ಪ್ರಾಥಮಿಕ ಶಾಲೆಯಿಂದ ಹಿಡಿದು ಪರಿಣತರಾಗಿರುವ ಎಲ್ಲ ವಯೋಮಾನದವರಿಗೆ ಅನ್ವಯವಾಗುವಂತೆ 5 ವಿಭಾಗಗಳನ್ನು ಅಳವಡಿಸಲಾಗಿದೆ. ಮಂಗಳಾ ಸ್ಟೇಡಿಯಂನಿಂದ ಪ್ರಾರಂಭವಾಗುವ ಈ ಮ್ಯಾರಥಾನ್ ಬೇರೆ ಬೇರೆ ದೂರಗಳನ್ನು ಕ್ರಮಿಸಿ ಮತ್ತೆ ಸ್ಟೇಡಿಯಂಗೆ ಹಿಂದಿರುಗುವುದು. ಈ ಬಾರಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಸ್ಪರ್ಧಿಸಿರುವ ಇಬ್ಬರು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಗುರುವಾರ, 5 ಜನವರಿ 2017 | ಪುಟಗಳು: 14+4+4 | ಬೆಲೆ: ₹ 4.00
www.vijaykarnataka.com
ಸಂಪುಟ: 16 | ಸಂಚಿಕೆ: 160
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರದುರ್ಗ | ಗಂ
PRIDE OF YOU

Sahyadri College of Engineering & Management
CENTRAL LIBRARY

ಅಮೆರಿಕದ ಸಂಗೀತಗಾರ ಮೈಕ್ ಪೋಸ್ನರ್ ತಿಂಗಳಾಂತ್ಯದಲ್ಲಿ ಭಾರತಕ್ಕೆ: 3 ನಗರಗಳಲ್ಲಿ ಶೋ

ರಾಷ್ಟ್ರೀಯ ಪಿಂಚಣಿ ಯೋಜನೆ: ಕಳೆದ ವರ್ಷ ಶೇ. 9.47 ರಿಟರ್ನ್ಸ್, 2017ರಲ್ಲೂ ಹೂಡಿಕೆಗೆ ಉತ್ತಮ P08

ಕುಂಗ್ ಫು ಯೋಗ ಚಿತ್ರದಲ್ಲಿ ಜಾಕಿ ಚಾನ್ ಜತೆ ನಟಿಸುವ ಅವಕಾಶವೇ ಯೋಗ: ಅಮೈರಾ ದಸ್ತೂರ್

# ಹಾಫ್ ಮ್ಯಾರಥಾನ್ ಮಾಹಿತಿ ಪತ್ರ ಬಿಡುಗಡೆ



**ವಿಕ ಸುದ್ದಿಲೋಕ** ಮಂಗಳೂರು

ನಿಟ್ಟೆ ವಿಶ್ವವಿದ್ಯಾನಿಲಯ, ನಿಟ್ಟೆ ಎಜುಕೇಶನ್ ಟ್ರಸ್ಟ್ ಮತ್ತು ದಕ್ಷಿಣ ಕನ್ನಡ ಅಥ್ಲೆಟಿಕ್ಸ್ ಅಸೋಸಿಯೇಶನ್ ಸಹಕಾರದಲ್ಲಿ ಫೆ.19ರಂದು ನಡೆಯುವ 'ನಿಟ್ಟೆ ಮಂಗಳೂರು ಮ್ಯಾರಥಾನ್- 2017'ನ ಮಾಹಿತಿ ಪತ್ರ ಬಿಡುಗಡೆ ಸಮಾರಂಭ ನಗರದ ಓಶಿಯನ್ ಪರ್ಲ್ ಸಭಾಂಗಣದಲ್ಲಿ ಬುಧವಾರ ನಡೆಯಿತು.

ಜಿಲ್ಲಾಧಿಕಾರಿ ಡಾ.ಜಗದೀಶ್ ಕೆ.ಜಿ. ಮಾಹಿತಿ ಪತ್ರ ಬಿಡುಗಡೆಗೊಳಿಸಿದರು.

ನಿಟ್ಟೆ ಯುನಿವರ್ಸಿಟಿ ಕುಲಪತಿ ಹಾಗೂ ನಿಟ್ಟೆ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಎನ್. ವಿನಯ ಹೆಗ್ಡೆ ಅಧ್ಯಕ್ಷತೆ ವಹಿಸಿ, ಒಂದು ಕಾಲದಲ್ಲಿ ಕ್ರೀಡೆಯಲ್ಲಿ ಮಂಗಳೂರು ಮಹತ್ವದ ಸಾಧನೆ ಮಾಡಿತ್ತು. ನಿಟ್ಟೆ ವಿವಿ ಮ್ಯಾರಥಾನ್ ಮೂಲಕ ಕ್ರೀಡೆಗೆ ಪ್ರಾಧಾನ್ಯತೆ ನೀಡುತ್ತಿದೆ ಎಂದರು.

**ಕೇಂದ್ರ ಮೈದಾನ ಬದಲಾಗಿಲ್ಲ!**

ಮಂಗಳೂರು ಕೇಂದ್ರ ಮೈದಾನ 1962ರಲ್ಲಿ ಹೇಗಿತ್ತೋ, 2016ರಲ್ಲೂ ಹಾಗೆಯೇ ಇದೆ. ಕ್ರೀಡಾಪಟುಗಳಿಗೆ ಯಾವುದೇ ಸೌಲಭ್ಯ ಕಲ್ಪಿಸಿಲ್ಲ ಎಂದು ಕ್ರೀಡಾಪಟು ಕೆ.ಶ್ರೀಧರ ಆಳ್ವ ಖೇದ ವ್ಯಕ್ತಪಡಿಸಿದರು.

ಮಂಗಳೂರಿನಲ್ಲಿ ಕ್ರೀಡಾ ಸೌಲಭ್ಯಗಳು ಇಲ್ಲದ ಹಿನ್ನೆಲೆಯಲ್ಲಿ ನೋವಿನಿಂದ 1960ರಲ್ಲಿ ಹುಟ್ಟೂರು ಬಿಟ್ಟು ಬೆಂಗಳೂರಿಗೆ ಹೋಗಿ ಸಾಧನೆ ಮಾಡಿದ್ದೆ. ಈಗ ಶೇ.1 ಮಕ್ಕಳು ಮಾತ್ರ ಕ್ರೀಡಾ ಸಾಧನೆ ಮಾಡುತ್ತಿದ್ದಾರೆ. ಇನ್ನಾದರೂ ಏನಾದರೂ ಮಾಡಿ ಎಂದು ಅವರು ನೋವಿನಿಂದ ಹೇಳಿದರು.

ದ.ಕ. ಅಥ್ಲೆಟಿಕ್ಸ್ ಅಸೋಸಿಯೇಶನ್ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ, ಕರ್ನಾಟಕ ರಾಜ್ಯ ಅಥ್ಲೆಟಿಕ್ಸ್ ಅಸೋಸಿಯೇಶನ್ ಗೌರವ ಕಾರ್ಯದರ್ಶಿ ಚಂದ್ರಶೇಖರ ರೈ, ನಿಟ್ಟೆ ಹಾಫ್ ಮ್ಯಾರಥಾನ್ ರಾಯಭಾರಿ ಅಂತಾರಾಷ್ಟ್ರೀಯ ಕ್ರೀಡಾಪಟುಗಳಾದ ಶ್ರೀಧರ ಆಳ್ವ ಮತ್ತು ಅನಿಲ್ ಶೆಟ್ಟಿ ಉಪಸ್ಥಿತರಿದ್ದರು.

ನಿಟ್ಟೆ ಯುನಿವರ್ಸಿಟಿಯ ಸಹ ಕುಲಪತಿ ವಿಶಾಲ್ ಹೆಗ್ಡೆ ಸ್ವಾಗತಿಸಿದರು. ದಕ್ಷಿಣ ಕನ್ನಡ ಅಥ್ಲೆಟಿಕ್ ಅಸೋಸಿಯೇಶನ್ ಕಾರ್ಯದರ್ಶಿ ತಾರನಾಥ ಶೆಟ್ಟಿ ವಂದಿಸಿದರು.

### ಫೆ.19ರಂದು ಮ್ಯಾರಥಾನ್

**ಫೆ.19ರಂದು ಐದನೇ ಆವೃತ್ತಿಯ ನಿಟ್ಟೆ ಮಂಗಳೂರು ಹಾಫ್ ಮ್ಯಾರಥಾನ್ ಐದು ವಿಭಾಗಗಳಲ್ಲಿ ನಡೆಯಲಿದೆ. ಮಂಗಳಾ ಸ್ಟೇಡಿಯಂನಿಂದ ಆರಂಭಗೊಂಡು ವಿವಿಧೆಡೆ ಸಂಚರಿಸಿ, ಸ್ಟೇಡಿಯಂಗೆ ಮರಳಲಿದೆ. ಹೆಚ್ಚಿನ ಮಾಹಿತಿಯನ್ನು www.marathon.nitte.edu.in ನಿಂದ ಪಡೆಯಬಹುದು.**

~ಮುಂಜಾನೆ ಮಾತು~
ಸಂಬಂಧಗಳು ನಾಲಿಗೆಗಿಂತ ಹೃದಯವನ್ನು ಇಷ್ಟಪಡುತ್ತವೆ. ಉದ್ದುದ್ದ ಮಾತುಗಳಿಗಿಂತ ಹೃದಯಕ್ಕೆ ಹತ್ತಿರವಾಗಬಲ್ಲ ಮೃದು ನಡವಳಿಕೆ ನಮ್ಮದಾಗಲಿ!

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1 ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI • MANGALURU | ಮಂಗಳೂರು • ಸಂಪುಟ 5 • ಸಂಚಿಕೆ 276
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 5 ಜನವರಿ 2017 | ಗುರುವಾರ | 5 JANUARY 20

College of Engineering & Management
CENTRAL LIBRARY



# ಫೆ.19ರಂದು 'ನಿಟ್ಟೆ ಮಂಗಳೂರು ಮ್ಯಾರಥಾನ್'

## ಶ್ರೀಧರ ಆಳ್ವ, ಅನಿಲ್ ಶೆಟ್ಟಿ ಭಾಗಿ | ಲಾಂಛನ, ಭಿತ್ತಿಪತ್ರ ಬಿಡುಗಡೆ

■ **ವಿಜಯವಾಣಿ ಸುದ್ದಿಜಾಲ** ಮಂಗಳೂರು

ನಿಟ್ಟೆ ವಿಶ್ವವಿದ್ಯಾಲಯ ವತಿಯಿಂದ ದ.ಕ. ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಶನ್ ಸಹಯೋಗದಲ್ಲಿ ಐದನೇ ಆವೃತ್ತಿಯ 'ನಿಟ್ಟೆ ಮಂಗಳೂರು ಮ್ಯಾರಥಾನ್' ಫೆಬ್ರವರಿ 19ರಂದು ಹಮ್ಮಿಕೊಳ್ಳಲಾಗಿದೆ.

ಕಳೆದ ವರ್ಷ 10 ಕಿ.ಮೀ, 5 ಕಿ.ಮೀ, 3 ಕಿ.ಮೀ, 2 ಕಿ.ಮೀ ಮ್ಯಾರಥಾನ್ ನಡೆದಿದ್ದು, 15 ಸಾವಿರ ಮಂದಿ ಪಾಲ್ಗೊಂಡಿದ್ದರು. ಈ ಬಾರಿ ಪ್ರಾಥಮಿಕ ಶಾಲೆಯಿಂದ ತೊಡಗಿ ಪರಿಣಿತರಾಗಿರುವ ಎಲ್ಲ ವಯೋಮಾನದವರಿಗೆ ಅನ್ವಯವಾಗುವಂತೆ 5 ವಿಭಾಗ ಅಳವಡಿಸಲಾಗಿದೆ.

ಮಂಗಳಾ ಸ್ಟೇಡಿಯಂನಿಂದ ಆರಂಭಗೊಂಡು ಮ್ಯಾರಥಾನ್ ಬೇರೆ ಬೇರೆ ದೂರಗಳನ್ನು ಕ್ರಮಿಸಿ ಮತ್ತೆ ಸ್ಟೇಡಿಯಂಗೆ ಹಿಂದಿರುಗಲಿದೆ. ಅಂತಾರಾಷ್ಟ್ರೀಯ ಕ್ರೀಡೆಯಲ್ಲಿ ಡೆಕಾಥ್ಲಾನ್‌ನಲ್ಲಿ ಭಾರತೀಯ ರೈಲ್ವೆಯನ್ನು ಪ್ರತಿನಿಧಿಸಿದ ಶ್ರೀಧರ ಆಳ್ವ, ಬಾಂಗ್ಲಾದೇಶದಲ್ಲಿ ನಡೆದ ಸಾರ್ಕ್ ಗೇಮ್ 4/100 ರಿಲೇಯಲ್ಲಿ ಚಿನ್ನದ ಪದಕ ಗೆದ್ದ ಅನಿಲ್ ಶೆಟ್ಟಿ ಭಾಗವಹಿಸಲಿದ್ದಾರೆ.



ವಿಜಯವಾಣಿ ಚಿತ್ರ

ನಿಟ್ಟೆ ಮಂಗಳೂರು ಮ್ಯಾರಥಾನ್ ಲಾಂಛನ ಬಿಡುಗಡೆಯಾಯಿತು.

**ಲಾಂಛನ ಬಿಡುಗಡೆ:** ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ನಿಟ್ಟೆ ಮ್ಯಾರಥಾನ್ ಲಾಂಛನವನ್ನು ಜಿಲ್ಲಾಧಿಕಾರಿ ಡಾ.ಕೆ.ಜಿ.ಜಗದೀಶ್ ಬಿಡುಗಡೆಗೊಳಿಸಿದರು. ಇದೇ ಸಂದರ್ಭ ಮ್ಯಾರಥಾನ್ ಭಿತ್ತಿಪತ್ರ ಬಿಡುಗಡೆ ಮಾಡಲಾಯಿತು.

ನಿಟ್ಟೆ ವಿವಿ ಕುಲಪತಿ ಎನ್.ವಿನಯ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ದ.ಕ ಅಥ್ಲೆಟಿಕ್ಸ್ ಅಸೋಸಿಯೇಶನ್ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಪ್ರಾಸ್ತಾವಿಕ ಮಾತನಾಡಿದರು. ಮ್ಯಾರಥಾನ್ ಬ್ರಾಂಡ್ ಅಂಬಾಸಿಡರ್‌ಶ್ರೀಧರ್ ಆಳ್ವ, ಅನಿಲ್ ಶೆಟ್ಟಿ, ನಿಟ್ಟೆ ವಿವಿ ನಿರ್ದೇಶಕ ಡಾ.ರಾಜಶೇಖರ್ ಎಂ, ಕರ್ನಾಟಕ ಅಥ್ಲೆಟಿಕ್ ಅಸೋಸಿಯೇಶನ್ ಕಾರ್ಯದರ್ಶಿ ಚಂದ್ರಶೇಖರ್ ರೈ ಇದ್ದರು. ನಿಟ್ಟೆ ವಿವಿ ಸಹಕುಲಪತಿ ವಿಶಾಲ್ ಹೆಗ್ಡೆ ಸ್ವಾಗತಿಸಿ, ಅಸೋಸಿಯೇಶನ್ ಕಾರ್ಯದರ್ಶಿ ತಾರಾನಾಥ ಶೆಟ್ಟಿ ವಂದಿಸಿದರು.

> ಇಂದು ಕಾಲೇಜುಗಳ ಆಟದ ಮೈದಾನಗಳಲ್ಲಿ ಅಕಾಡೆಮಿಕ್ ಬ್ಲಾಕ್‌ಗಳು ತಲೆಯೆತ್ತುತ್ತಿರುವುದು ವಿಷಾದನೀಯ, ಅಂಥ ಕಾಲೇಜುಗಳಿಗೆ ಮುಂದುವರಿಯಲು ಹಕ್ಕಿಲ್ಲ. ಶಿಕ್ಷಣ ಬೇಕು, ಹಾಗೆಂದು ಕ್ರೀಡೆಯನ್ನು ಕಡೆಗಣಿಸಲೇಬಾರದು.
>
> | ಡಾ.ಎನ್.ವಿನಯ ಹೆಗ್ಡೆ